
ಮನುಷ್ಯಸ್ನೇಹಿ ಮೀನು
ಮಾವೋರಿ ರಾಸ್ಸೆ

ಬಣ್ಣಬಣ್ಣದ ಕಲ್ಲುಹೂವುಗಳು. ಹಸಿರು, ನೀಲಿ, ಗುಲಾಬಿ ಛಾಯೆಗಳ ಭಾರೀ ಹೂಕೋಸಿನಂತಹ ರಚನೆಗಳು. ಅದರ ನಡುವೆ ಸರಿವ ಮೀನ ಹಿಂಡು...

ಹತ್ತಿಪ್ಪತ್ತಲ್ಲ, ನೂರು ಸಾವಿರವಲ್ಲ, ಅಗಣಿತ! ಎಣಿಕೆ ತಪ್ಪಿ ನೋಡುತ್ತಿರುವಾಗ ನಾವಿರುವುದು ಹವಳ ದ್ವೀಪದಲ್ಲಿ; ಕಾಣುತ್ತಿರುವುದು ಬಂಡೆಯ ಮೇಲಣ ಗಿಡವಲ್ಲ, ಹವಳ ಪ್ರಾಣಿ ಎಂದರಿವಾದದ್ದೇ ರೋಮಾಂಚನವಾಯಿತು. ಹವಳ ಸಸ್ಯವಲ್ಲ, ಪ್ರಾಣಿ ಎನ್ನಲು ಗ್ರೀಕ್ ವಿಜ್ಞಾನಿಗಳ ಕಾಲದಿಂದ ನಡೆದ ವಾದವಿವಾದಗಳೆಲ್ಲ ನೆನಪಾದವು. ಸಪೂರ ಬೆರಳಿನಂತಿರುವ ರಚನೆಗಳು ಅಲೆಅಲೆಯಾಗಿ, ನಿಧಾನವಾಗಿ ಚಲಿಸುತ್ತಿದ್ದವು. ಬಂಡೆಗಂಟಿಕೊಂಡ ಹುಲ್ಲು ಜೊಂಡಿನಂತೆ, ಕಮಲದ ದೇಟೆಯ ಹೂವಿನಂತೆ, ಹೂಕೋಸಿನಂತಿರುವ ಅನಿಮೋನ್‌ರೂಪಿ ಹವಳ. ಕೆಂಪು, ಗುಲಾಬಿ, ನಸುಗೆಂಪು, ನೀಲಿ, ಹಸಿರು, ಬೆಳ್ಳಿ, ಬಿಳಿ, ಹಳದಿ, ಕಿತ್ತಳೆ, ನೇರಳೆ ಬಣ್ಣಗಳ ಹವಳ. ಬೀಸುವ ಗಾಳಿಗೆ ಬೆಳೆದು ನಿಂತ ಪೈರು ಹೊಯ್ದಾಡುತ್ತ ತುಯ್ಯುವ ಹಾಗೆ ಸ್ಲೋಮೋಷನ್‌ನಲ್ಲಿ ಚಲಿಸುವ ಹವಳ. ಕೆಲವು ರೇಡಿಯಂನಂತಹ ಹೊಳಪು ಮೈ ಹೊಂದಿದ್ದವು. ಹವಳಜೀವಿ ಸ್ರವಿಸುವ ಕ್ಯಾಲ್ಸಿಯಂ ಲವಣವೇ ಗಟ್ಟಿಯಾಗಿ, ಬುಡದ ಬಂಡೆಯಾಗಿ, ಅದರಿಂದಲೇ ಆಭರಣದ ಹವಳ ತಯಾರಿಸುವರೆಂಬ ಮಾಹಿತಿ ಮನದಲ್ಲಿ ಹಾದುಹೋಯಿತು.

ಅಷ್ಟರಲ್ಲಿ...

ಓಹ್, ಇದು ಅದೇ, ನೀಮೋ! 'ಫೈಂಡಿಂಗ್ ನೀಮೋ' ಸಿನಿಮಾದ ಕೆಂಪು, ಬಿಳಿ, ಕಪ್ಪು ಮಿಶ್ರಪಟ್ಟಿಗಳ ಕ್ಲೌನ್ ಫಿಶ್! ಸೀ ಅನಿಮೋನಿನ ಬೆರಳುಗಳ ನಡುವೆ ಕಣ್ಣಾಮುಚ್ಚಾಲೆಯಾಡುವ ತಿಕ್ಕಲಂತೆ, ಆಗಷ್ಟೇ ಈಯ್ದ ಕರು ಚಂಗಲು ಹಾರುವಂತೆ ಪಣ್‌ಪಣ್ ನೆಗೆಯುತ್ತ ಆಚೀಚೆ ಸುಳಿಯತೊಡಗಿತು. ಅನಿಮೋನಿಗೆ ಕಚಗುಳಿಯಿಟ್ಟಂತೆನಿಸಿರಬಹುದು, ಅಲೆಅಲೆಯಾಗಿ ತನ್ನ ಬೆರಳುಗಳ ಕುಣಿಸುತ್ತಿದೆ! ನಾವು ಕೆಮ್ಮೀನಿನ ಚಲನೆ, ಚಾಲಾಕಿತನ, ವಿಸ್ಮಯಗಳ ಕಣ್ಣಿನ ತುಂಬಿಕೊಳ್ಳುತ್ತಿರುವಾಗ ಚಂದದ ಕಡುನೀಲಿ ಮೀನು (ಡೋರಿ) ಎದುರೇ ಹಾಯಬೇಕೇ? ಸಿನಿಮಾದ ಪಾತ್ರಗಳೆಲ್ಲ ಕಡಲೊಳಗೆ ಹೀಗೆ ಕಣ್ಣೆದುರು ಬಂದಾವೆಂದು ಯಾರು ತಾನೇ ಊಹಿಸಿದ್ದರು?

'ಏನಿದೇನಿದು ಮಾಟ, ನೋಡಲೆನಿತಿದಚ್ಚರಿ!? ಸೊಗವೆ ಸೂರೆ ಹೋದ ಬೇಟ ನೋಡಿದನಿತು ಅಚ್ಚರಿ'!

ಅನಿಮೋನ್ ಹವಳವು ಕ್ಲೌನ್ ಮೀನಿನ ನೆಲೆ, ಮನೆ, ಗೂಡು ಎಲ್ಲ ಹೌದು. ಹವಳ ಸ್ರವಿಸುವ ರಾಸಾಯನಿಕ ಎಷ್ಟು ವಿಷಯುಕ್ತವೆಂದರೆ ಮತ್ತಾವ ಮೀನೂ ಅದರ ಬಳಿ ಸುಳಿಯದು. ಆದರೆ ಪುಟ್ಟ ಕೆಮ್ಮೀನಿಗೆ ಅನಿಮೋನಿನ ವಠಾರವೇ ಮನೆ. ಹವಳ ತಿನ್ನಲಾರದ ಎಷ್ಟೋ ಜಲಚರಗಳನ್ನು ತಿಂದು ಕೆಮ್ಮೀನು ಹಾಕುವ ಪಿಷ್ಟೆ ಹವಳಕ್ಕೆ ಆಹಾರವಾಗಿದೆ. ಕೆಮ್ಮೀನಿನ ತಿಕ್ಕಲುತನದ ಚಲನೆ ಹವಳದ ಬೆರಳುಗಳೊಳಗೆ, ನಡುವೆ ಕಡಲ ನೀರು ಸರಾಗವಾಗಿ ಹರಿಯಲು ಸಹಾಯ ಮಾಡುತ್ತದೆ. ಒಂದು ಪುಟ್ಟ ಮೀನು, ಕಡಲ ತಳಕ್ಕಂಟಿದ ಹವಳ ಸಹಬಾಳ್ವೆಯ ಮಾದರಿಯಾಗಿ ಬದುಕಿವೆಯಲ್ಲ! ನಮಗಿಲ್ಲದ ಅರಿವ ಈ ಜೀವಗಳಿಗೆ ತುಂಬಿದರ್‍ಯಾರೆ?

## ಚಲನೆಯೇ ಕಡಲಾಳದ ಪರಮಸತ್ಯ!

ನಮ್ಮುಸಿರ ಹೊರತು ಮತ್ತಾವ ಸದ್ದೂ ಕೇಳದ ಜಲನಿಶ್ಶಬ್ದದಲ್ಲಿ ಹೆಸರು ಗೊತ್ತಿರದ ಅಸಂಖ್ಯ ಜೀವಗಳು ಕಡಲಾಳದ ರಂಗಸ್ಥಳದಲ್ಲಿ ಚಲಿಸುತ್ತಿದ್ದವು. ಜೀಬ್ರಾ ಪಟ್ಟೆಗಳಿರುವ ಮೀನು, ಕೆಂಪು ರೆಕ್ಕೆಗಳ ಬೆಳ್ಳಿ ಮೀನು, ಹಸಿರು ನೀಲಿ ಮಿಶ್ರ ಮೀನು, ಪುಟ್ಟ ಮೀನು, ದೊಡ್ಡ ಮೀನು, ಉದ್ದನೆಯ, ಚಪ್ಪಟೆಯಿರುವ, ತಟ್ಟೆಯಂತಿರುವ, ಹಾವಿನಂತಿರುವ, ಚೀಲದಂತಿರುವ ಏನೇನೋ ಆಕಾರಗಳು ಸುಳಿಯುತ್ತಿದ್ದವು. ಪಣ್‌ಪಣ್ ಎಂದು ಕಣ್ಣೆದುರೇ ಕಡಲ್ಗುದುರೆ ಪಲ್ಟಿ ಹೊಡೆದು ಹೋಯಿತು. ಪ್ರತಿಯೊಂದೂ ನಿಧಾನವಾಗಿ, ನವಿರಾಗಿ, ಲಯಬದ್ಧವಾಗಿ ತುಯ್ಯುತ್ತಿವೆ. ನಿಶ್ಚಲ ನಿಂತಂತೆ ಕಾಣುವ ಕಡಲು ಒಳಗೊಳಗೆ ನಿರಂತರ ಪ್ರವಹಿಸುತ್ತಿದೆ.

ನಿರಂತರ ಚಲನೆಯೇ ಕಡಲಾಳದ ಪರಮಸತ್ಯ. ನಿರಂತರ ಚಲನೆಯೇ ಪ್ರಕೃತಿಯ ಪರಮ ಸತ್ಯ. ಸ್ಥಗಿತವಾದ ಯಾವುದೂ ಇಲ್ಲಿಲ್ಲ. ಚಲನೆಯಿಂದ ಹಗುರ, ಹಗುರಗೊಂಡು ಚಲನವಲನ! ನಾವು ನಿಂತವರು ನಿಂತೇ ಇದ್ದೆವು ಚಲಿಸುವವರ ನೋಡುತ್ತ.

ನತಮಸ್ತಕಳಾಗಿ ಪಾತಾಳ ವೈಭವಕ್ಕೆ ಬೆರಗುವಡೆದು ನಿಂತಿರುವಾಗ ಪಕ್ಕದಲ್ಲೊಂದು ಬೃಹತ್ ನೆರಳು ಸರಿದು ಹೋಯಿತು. ಬೆಕ್ಕು ಕಾಲು ಸವರಿ ಹೋಗುವಂತೆ ಹೆಗಲ ಸವರಿ ದೊಡ್ಡದೇನೋ ಒಂದು ಈಚೆಯಿಂದಾಚೆ ಹೋದಂತಾಯಿತು. ಕತ್ತು ಮೇಲೆತ್ತಲಾಗದೆ ಶಿರಸ್ತ್ರಾಣದಡಿಯಲ್ಲೇ ನೋಡಿದೆ. ವಿಷಾದಗ್ರಸ್ತ ಚಹರೆಯಂತೆ ಕಾಣುವ ತಗ್ಗಿದ ಬಾಯಿ, ಬೆರಗಿನಿಂದ ಅರಳಿಸಿ ಹೊರಸೂಸಿದಂತಿರುವ ಕಣ್ಣುಗಳು, ದಪ್ಪ ನೀಲಿ ತುಟಿ, ದೊಡ್ಡ ತಲೆ, ತೆರೆದುಕೊಂಡೇ ಇರುವ ಬಾಯಿಯ ಬೃಹತ್ ಕಾಯ ನನ್ನೆದುರು ಬಂತು. ಬುಲ್‌ಡಾಗ್ ನಾಯಿಯಂತೆ ಕಾಣುತ್ತಿದ್ದ ಅನಿಮಿಷ ಹತ್ತಿರ ಬರತೊಡಗಿ ಮೈಮೇಲೆರಗುವುದೋ ಎಂದು ನಾನಂಜುತ್ತಿರುವಾಗ ವಾನ್ಸ್ ಬಂದ. ಅವ ಕಂಡದ್ದೇ ಬಳಿ ಹೋಗಿ ಸವರತೊಡಗಿತು. ನೀರೊಳಗೆ ತೆಗೆವ ಕ್ಯಾಮೆರಾದಿಂದ ಫೋಟೊಸೆಷನ್ನೂ ನಡೆಯಿತು. ಮೈ ಸವರಿ ಮಾತನಾಡಿಸುವ ಆ ಮನುಷ್ಯಸ್ನೇಹಿ, ನಿರಪಾಯಕಾರಿ ಭಾರೀ ಮೀನು ಮಾವೋರಿ ರಾಸ್ಸೆ ಅಥವಾ ನೆಪೋಲಿಯನ್ ಫಿಶ್.

ಇಂತಿಪ್ಪ ಹವಳದ ವಿಸ್ಮಯಲೋಕದಲ್ಲಿ ಮುಳುಗಿರುವಾಗ ನಡೆದದ್ದು ಮುಗಿಯಿತೆಂಬಂತೆ ಮೆಟ್ಟಿಲು ಕೈಗೆ ತಾಗಿತು. ಕಡಲಜೀವಿಗಳಿಗೊಂದು ವಿದಾಯ ಹೇಳಿ ಒಂದೊಂದೇ ಹೆಜ್ಜೆ ಮೇಲಿಟ್ಟ ಹಾಗೆ ಕಿವಿ ಗುಂಯ್ಗ್ ಎನ್ನುತ್ತ ದಬ್ಬಾಕತೊಡಗಿತು. ಮೊದಲೇ ಕೊಟ್ಟ ಸೂಚನೆಯಂತೆ ತಲೆಯಲುಗಿಸುತ್ತ, ಉಗುಳು ನುಂಗಿದಾಗ ಸರಿಯಾಯಿತು. ಇನ್ನೇನು ತಲೆ ನೀರಿಂದ ಮೇಲೆ ಬಂತು ಅನ್ನುವಾಗ ಮೊದಲೇ ಮೇಲೆ ಬಂದಿದ್ದ ವಾನ್ಸ್ ದಡಕ್ಕನೆ ಹೆಲ್ಮೆಟ್ ಎಳೆದ. ಅಬ್ಬಾ! ತಲೆಯ ಭಾರ ಕಳೆಯಿತು. ನೀರಿನಿಂದ ಮೇಲೆ ಬಂದದ್ದೇ ಸೊಂಟ ಕಳಚಿ ಬೀಳುವಷ್ಟು ಭಾರವಾಯಿತು. ಭಾರವಾದದ್ದನ್ನು ತೆಗೆದಿಟ್ಟು, ನೆನಪುಗಳ ಭಾರದೊಂದಿಗೆ ಡೆಕ್ಕಿಗೆ ಹೋದೆವು.

ಒಂದಿಷ್ಟೂ ಬೇಸರಿಸದೆ ದಿನನಿತ್ಯ ಹೇಳುವುದನ್ನೇ ಮತ್ತೆ ಮತ್ತೆ ಹೇಳುತ್ತ, ಅವೇ ಅವೇ ಪ್ರಶ್ನೆಗಳಿಗೆ ಉತ್ತರಿಸುತ್ತ, ನಗೆಮೊಗ ಹೊತ್ತ ಆರೂವರೆ ಅಡಿ ಎತ್ತರದ ಮನುಷ್ಯ ವಾನ್ಸ್. ಆಳಸಮುದ್ರ ಮುಳುಗುಗಾರ. ಯಾವ ಮಾಹಿತಿ ಕೇಳಿದರೂ ಥಟ್ಟನುತ್ತರಿಸುವ ಕಡಲ ಎನ್‌ಸೈಕ್ಲೊಪೀಡಿಯಾ. ಮೆಲ್ಬರ್ನಿನ ಆತ ಬಾಲ್ಯದಿಂದಲೇ ಡೈವಿಂಗ್ ಮಾಡುತ್ತಿದ್ದು ಈ ಕ್ರೂಸಿನಲ್ಲಿ ಇಪ್ಪತ್ತೆಂಟು ವರ್ಷಗಳಿಂದಿದ್ದಾನೆ. ನಡುನಡುವೆ ರಜೆ ಪಡೆದು ಹಾಡು ಕಲಿಯುತ್ತ, ಕಲಿಸುತ್ತ, ಕಚೇರಿ ಮಾಡುತ್ತಾನೆ.

ಅಂದಹಾಗೆ ಈ ತರುಣನ ವಯಸ್ಸೆಷ್ಟು ಎಂದು ಕೇಳಿದೆವು. ಅರವತ್ತೂರು, ನಂಬಿ ಎಂದ! ಅರವತ್ತರ ಬಳಿಕವೂ ಇಷ್ಟು ಫಿಟ್ ಆಗಿ, ಉತ್ಸಾಹಿತನಾಗಿರುವುದರ ಗುಟ್ಟೇನೆಂದು ಕೇಳಿದಾಗ, 'ನಾನೊಬ್ಬ ಟ್ರೂ ಆಸ್ಟ್ರೇಲಿಯನ್. ಬದುಕಿಬಿಡು ಎಂಬ ಆಸ್ಟ್ರೇಲಿಯನ್ ಸ್ಪಿರಿಟ್ ಮತ್ತು ಬಿಯರ್ ನನ್ನ ಉತ್ಸಾಹದ ಮೂಲ. ನಾನು ಬಿಯರ್ ಬಿಟ್ಟು ಮತ್ತೇನನ್ನೂ ಕುಡಿಯುವುದಿಲ್ಲ. ಪ್ರವಾಸ ಬರುವವರಿಗೆಲ್ಲ ಧೈರ್ಯ ತುಂಬಿ ಸುರಕ್ಷಿತವಾಗಿ ನೀರೊಳಗಿಳಿಸಿ ಆ ಇನ್ನೊಂದು ಲೋಕ ನೋಡುವಂತೆ ಪ್ರೇರೇಪಿಸುವುದು; ಕಡಲಿಗೆ ಇನ್ನಷ್ಟು ಹತ್ತಿರಾಗುವಂತೆ ಮಾಡುವುದು ನನಗೆ ಖುಷಿ ಕೊಡುತ್ತದೆ' ಎಂದ.

ನಮ್ಮ ನೆಲದಿಂದ ಇಷ್ಟು ದೂರ ಬಂದು ನೆಲದಾಳ ನೋಡುವ ಅವಕಾಶವಿತ್ತ ಕಾಲವೇ, ನಿಸರ್ಗವೇ, ವಾನ್ಸ್ ಎಂಬ ಗೆಳೆಯನೇ, ನಿಮಗೆ ಶರಣು ಶರಣು. ■